# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 723 (**ಸಾರಿಗೆ ಇಲಾಖೆಯಿಂದ ವರ್ಗಾಯಿಸಲ್ಪಟ್ಟಿದೆ.**) |
| ಸದಸ್ಯರ ಹೆಸರು | : | ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 12-07-2023 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿಯಲ್ಲಿ ನಗರ ಸಾರಿಗೆ ಬಸ್ ನಿಲ್ದಾಣದ ಕಾಮಗಾರಿ ಪ್ರಾರಂಭಿಸಿದ ವರ್ಷ ಹಾಗೂ ಒಟ್ಟು ವೆಚ್ಚ ಎಷ್ಟು; | ಬೆಳಗಾವಿ ನಗರದಲ್ಲಿ ಬೆಳಗಾವಿ ಸ್ಮಾರ್ಟ್ ಸಿಟಿ ವತಿಯಿಂದ "ಬೆಳಗಾವಿ ಸಿಟಿ ಬಸ್ ನಿಲ್ದಾಣ ನಿರ್ಮಾಣ" ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ.<br><br>ಸದರಿ ಯೋಜನೆ ಪ್ರಾರಂಭವಾದ ದಿನಾಂಕ ಹಾಗೂ ಆರ್ಥಿಕ ವೆಚ್ಚದ ವಿವರಗಳು ಈ ಕೆಳಕಂಡಂತಿವೆ:<br>• ಯೋಜನೆಯ ಪ್ರಾರಂಭ ದಿನಾಂಕ:09.10.2018<br>• ವಿಸ್ತೃತವಾದ ಯೋಜನಾ ವರದಿ ಮೊತ್ತ : ರೂ.49.20 ಕೋಟಿ<br>• ಈವರೆಗಿನ ವೆಚ್ಚ : ರೂ.32.81 ಕೋಟಿ |
| ಆ) | ನಗರ ಸಾರಿಗೆ ಬಸ್ ನಿಲ್ದಾಣದ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; | ಬೆಳಗಾವಿ ಸಿಟಿ ಬಸ್ ನಿಲ್ದಾಣದ ನಿರ್ಮಾಣ ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ. ಸದರಿ ಬಸ್ ನಿಲ್ದಾಣವು 2.07 ಎಕರೆ ಪ್ರದೇಶದಲ್ಲಿ ಹರಡಿದ್ದು, ಕಟ್ಟಡದ ನೆಲಮಾಳಿಗೆ ಸೇರಿದಂತೆ 5 ಮಹಡಿಗಳನ್ನು ಒಳಗೊಂಡಿದ್ದು, 3 ಘಟಕಗಳಾಗಿ ವಿಂಗಡಿಸಲಾಗಿದೆ.<br><br>• 1 ಹಾಗೂ 3ನೇ ಘಟಕದಲ್ಲಿ 5 ಮಹಡಿಗಳ RCC ಕೆಲಸಗಳು ಪೂರ್ಣಗೊಂಡಿದೆ, ಕಟ್ಟಡದ ಗೋಡೆಗಳಿಗೆ ಫ್ಲೋರಿಂಗ್ ಮತ್ತು ಪ್ಲಾಸ್ಟರಿಂಗ್ ಕೆಲಸ ಮುಕ್ತಾಯದ ಹಂತದಲ್ಲಿವೆ. ಪೈಟಿಂಗ್, ಎಲೆಕ್ಟ್ರಿಕಲ್ ಹಾಗೂ ಪ್ಲಂಬಿಂಗ್ ಕೆಲಸಗಳು ಪ್ರಗತಿಯಲ್ಲಿವೆ.<br>• 2ನೇ ಘಟಕದಲ್ಲಿ 3ನೇ ಮಹಡಿಯವರೆಗಿನ RCC ಕೆಲಸಗಳು ಮುಕ್ತಾಯಗೊಂಡಿದೆ. ಟೆರೇಸ್ ಫ್ಲೋರ್ ಸ್ಲ್ಯಾಬ್ ಕಾಮಗಾರಿ ಪ್ರಗತಿಯಲ್ಲಿದೆ.<br>• ಒಳಚರಂಡಿ ಸಂಸ್ಕರಣ ಘಟಕ ಹಾಗೂ ಹೊರಾಂಗಣ ಅಭಿವೃದ್ಧಿ ಕೆಲಸಗಳು ಪ್ರಗತಿಯಲ್ಲಿವೆ.<br>• ಎಲಿವೇಟರ್‌ಗಳ ಸಂಗ್ರಹಣೆ ಮತ್ತು ಅಳವಡಿಕೆ ಕೆಲಸ ಪ್ರಗತಿಯಲ್ಲಿದೆ.<br>• ಎಲ್ಲಾ ಮಹಡಿಗಳಲ್ಲಿ ಫ್ಲೋರಿಂಗ್ ಕಾಮಗಾರಿ, ಪೇಂಟಿಂಗ್ ಕಾಮಗಾರಿ ಹಾಗೂ ವಿದ್ಯುತ್ ಸಂಬಂಧಿತ ಕೆಲಸಗಳು ಪ್ರಗತಿಯಲ್ಲಿದೆ. |

| | | |
|---|---|---|
| ಇ) | ಸದರಿ ಕಾಮಗಾರಿಯು ನಿಧಾನ ಗತಿಯಲ್ಲಿ ಸಾಗುತ್ತಿರಲು ಕಾರಣಗಳೇನು; | ಬೆಳಗಾವಿ ಸಿಟಿ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಗೆ ಕಾರ್ಯಾದೇಶವನ್ನು ದಿನಾಂಕ:09.10.2018 ರಂದು ನೀಡಿದ್ದರೂ ಕಾಮಗಾರಿಯ ಕೆಲಸದ ಪ್ರದೇಶವನ್ನು ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ ಇವರೊಂದಿಗೆ ಒಡಂಬಡಿಕೆ ನಂತರ, 1.75 ಎಕರೆ ಭಾಗಶಃ ಜಾಗವನ್ನು ಮಾತ್ರ ದಿನಾಂಕ:16.02.2019ಕ್ಕೆ ಹಸ್ತಾಂತರಿಸಲಾಗಿದೆ.<br><br>ಮುಂದುವರೆದು, ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ, ಬೆಳಗಾವಿ ಇವರಿಂದ ಬಾಕಿ 0.32 ಎಕರೆ ಜಾಗವನ್ನು ಆಗಸ್ಟ್-2019ರಲ್ಲಿ ಹಸ್ತಾಂತರಿಸಲಾಗಿರುವುದರಿಂದ, ಕಾಮಗಾರಿ ಪ್ರಗತಿಯಲ್ಲಿ ವಿಳಂಬವಾಗಿದೆ.<br><br>ಇದಲ್ಲದೇ, ರಕ್ಷಣಾ ಇಲಾಖೆಯಡಿಯಲ್ಲಿ ಬರುವ 0.87 ಎಕರೆ ಜಾಗವು ವಿವಾದದಲ್ಲಿ ಇದ್ದ ಕಾರಣ, ದಿನಾಂಕ:23.02.2021 ರಂದು ವಿವಾದ ಪರಿಹರಿಸಲು ರಕ್ಷಣಾ ಇಲಾಖೆಗೆ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಿಂದ ಬದಲಿ ಜಾಗವನ್ನು ಹಸ್ತಾಂತರಿಸಲಾಗಿದೆ. ಆನಂತರದಲ್ಲಿ, ಈ ಭಾಗದಲ್ಲಿ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.<br><br>ಕೋವಿಡ್-19 ಸೋಂಕು ಕಾರಣ ದಿನಾಂಕ:24.03.2020 ರಿಂದ 03.05.2020 ರವರೆಗೆ ಲಾಕ್ ಡೌನ್ ಇದ್ದ ಕಾರಣ 2 ತಿಂಗಳು ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು.<br><br>2019ರಲ್ಲಿ ಬೆಳಗಾವಿಯಲ್ಲಿ ಅತೀವೃಷ್ಠಿ ಉಂಟಾದ ಕಾರಣದಿಂದಾಗಿ ಕಾಮಗಾರಿಯಲ್ಲಿ ತಾಂತ್ರಿಕ ವೇರಿಯೇಷನ್ ಉಂಟಾದ ಕಾರಣ ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ 27ನೇ ಮಂಡಳಿ ಸಭೆ ದಿನಾಂಕ:29.03.2022 ರಂದು ಹೆಚ್ಚಿನ ಅನುದಾನಕ್ಕೆ ಅನುಮೋದನೆ ಪಡೆದ ನಂತರ ಕಾಮಗಾರಿಯನ್ನು ಮುಂದುವರೆಸಲಾಗಿದ್ದು, ಈ ಕಾರಣಗಳಿಂದಾಗಿ ಕಾಮಗಾರಿ ಅನುಷ್ಠಾನದಲ್ಲಿ ಅನಿವಾರ್ಯ ವಿಳಂಬವಾಗಿದೆ. |
| ಈ) | ಸದರಿ ಬಸ್ ನಿಲ್ದಾಣ ಕಾಮಗಾರಿಯನ್ನು ಮುಕ್ತಾಯಗೊಳಿಸಿ ಪ್ರಯಾಣಿಕರಿಗೆ ಯಾವ ಕಾಲಮಿತಿಯೊಳಗೆ ಅನುಕೂಲ ಮಾಡಿಕೊಡಲಾಗುವುದು? | ಬೆಳಗಾವಿ ಸಿಟಿ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಯನ್ನು ಸೆಪ್ಟೆಂಬರ್-2023 ರೊಳಗೆ ಪೂರ್ಣಗೊಳಿಸಲಾಗುವುದು. |

ಸಂಖ್ಯೆ:ನಅಇ 99 ಸಿಎಸ್‌ಎಸ್ 2023

13/07/2023

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು